## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾಗಡಿ

<u>C.C. 858/2020</u>

CW-3/PW-2

| | | |
|---|---|---|
| ಹೆಸರು | ಃ- | ಮಧು |
| ತಂದೆ/ಗಂಡನ ಹೆಸರು | ಃ- | ಚಿಕ್ಕಣ್ಣ |
| ವಯಸ್ಸು | ಃ- | 27 ವರ್ಷ |
| ವೃತ್ತಿ | ಃ- | ವ್ಯವಸಾಯ |
| ವಾಸ ಸ್ಥಳ | ಃ- | ಅಗಲಕೋಟೆ |
| ದಿನಾಂಕ | ಃ- | 17-03-2022 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುತ್ತದೆ. ಅವರು ನಮ್ಮ ಊರಿನವರೇ ಆಗಿರುತ್ತಾರೆ, ಚಾಸಾ-1, 2, 4 ರವರ ಪರಿಚಯ ಇರುತ್ತದೆ. ಚಾಸಾ-1 ರವರು ಈಗ ಮೃತಪಟ್ಟಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಬೇರೆ ಯಾವುದೇ ಮಾಹಿತಿ ಇರುವುದಿಲ್ಲ.

(ಮಾನ್ಯ ಪಿಪಿ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

1. ದಿನಾಂಕ 25-08-2019 ರಂದು ವಿ ಎಸ್ ಎಸ್ ಎನ್ ಸೊಸೈಟಿ ಬಳಿ ನಾನು ಮತ್ತು ಚಾಸಾ-2 ರವರು ಇದ್ದಾಗ 1ನೇ ಆರೋಪಿಯು ಅಲ್ಲಿಯೇ ಇದ್ದನು ಎಂದರೆ ಸರಿಯಲ್ಲ. ಆ ದಿನ ಸಂಜೆ 5.00 ಗಂಟೆ ಸಮಯದಲ್ಲಿ ನಮ್ಮ ಊರಿನವರಾದ ಚಾಸಾ-1 ಗಂಗಣ್ಣನವರು ಅಗಲಕೋಟೆ ಹ್ಯಾಂಡ್ ಪೋಸ್ಟ್ ಕಡೆಯಿಂದ ಬೈಕಿನಲ್ಲಿ ಬರುತ್ತಿರುವಾಗ ಚಾಸಾ-1 ರವರನ್ನು ಆರೋಪಿಯು ಅಡ್ಡಗಟ್ಟಿ ಚೇತನ್ ವಿರುದ್ದ ಹೈಕೋರ್ಟ್ ನಲ್ಲಿ ಏಕೆ

ಕೇಸುಹಾಕಿದ್ದೀಯಾ ಆತನನ್ನು ಕೆಲಸದಿಂದ ತೆಗೆಸಿಹಾಕುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ನಿನಗೆ ಒಂದು ಗತಿಕಾಣಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿಯು ತೆಂಗಿನ ಗೊದಮೊಟ್ಟೆಯಿಂದ ಮುಖಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಗಲಾಟೆ ಸ್ಥಳಕ್ಕೆ ಅಲ್ಲಿಯೇ ಇದ್ದ ನಾನು ಮತ್ತು ಚಾಸಾ-2 ಹಾಗೂ ಇತತರು ಸ್ಥಳಕ್ಕೆ ಬಂದೆವು ಎಂದರೆ ಸರಿಯಲ್ಲ. ಚಾಸಾ-2 ರವರು ಆರೋಪಿಯ ಕೈಯಲ್ಲಿದ್ದ ತೆಂಗಿನ ಗೊದಮೊಟ್ಟೆಯನ್ನು ಕಿತ್ತುಕೊಂಡು ಜಗಳದಿಂದ ಚಾಸಾ-1 ರವರನ್ನು ಬಿಡಿಸಲು ಪ್ರಯತ್ನಪಟ್ಟರು ಎಂದರೆ ಸರಿಯಲ್ಲ. ಆದರೆ ಆರೋಪಿಯು ಅಲ್ಲಿಯೇ ಬಿದ್ದಿದ್ದ ಒಂದು ಕಾಡುಜಾತಿಯ ದೊಣ್ಣೆಯಿಂದ ಚಾಸಾ-1 ರವರ ಎಡಗೈಗೆ ಹೊಡೆದನು ಎಂದರೆ ಸರಿಯಲ್ಲ. ಆಗ ನಾನು ಆರೋಪಿಯ ಕೈಯಿಂದ ದೊಣ್ಣೆಯನ್ನು ಕಿತ್ತುಕೊಂಡನು ಎಂದರೆ ಸರಿಯಲ್ಲ, ಆದರೂ ಸಹ ಆರೋಪಿಯು ಕೈಗಳಿಂದ ಚಾಸಾ-1 ರವರ ಮುಖಕ್ಕೆ ಹೊಡೆದನು ಎಂದರೆ ಸರಿಯಲ್ಲ ನಂತರ ನಾನು, ಚಾಸಾ-2 ರವರು ಚಾಸಾ-1 ರವರನ್ನು ಜಗಳದಿಂದ ಬಿಡಿಸಿದೆವು ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಚಿಕಿತ್ಸೆಯನ್ನು ಪಡೆಯಲು ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಿದಂತೆ ಪೋಲಿಸರ ಮುಂದೆ ದಿನಾಂಕ 02-09-2019 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ನುಡಿದಿರುತ್ತಾರೆ.

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಮಾಗಡಿ

## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾಗಡಿ

C.C. 858/2020

CW-2/PW-1

| | | |
|---|---|---|
| ಹೆಸರು | ಃ- | ಮೇಲಗಿರಿಯಪ್ಪ |
| ತಂದೆ/ಗಂಡನ ಹೆಸರು | ಃ- | ಮೂಡ್ಲಪ್ಪ |
| ವಯಸ್ಸು | ಃ- | 46 ವರ್ಷ |
| ವೃತ್ತಿ | ಃ- | ವ್ಯವಸಾಯ |
| ವಾಸ ಸ್ಥಳ | ಃ- | ಅಗಲಕೋಟೆ |
| ದಿನಾಂಕ | ಃ- | 17-03-2022 |

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುತ್ತದೆ. ಅವರು ನಮ್ಮ ಊರಿನವರೇ ಆಗಿರುತ್ತಾರೆ, ಚಾಸಾ-1, 3 ರಿಂದ 5 ರವರ ಪರಿಚಯ ಇರುತ್ತದೆ. ಚಾಸಾ-1 ರವರು ಈಗ ಮೃತಪಟ್ಟಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿದ್ದ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯು ಪಂಚನಾಮೆಯಾಗಿದ್ದು ಪಂಚನಾಮೆಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆದಿರುತ್ತದೆ ಯಾವ ಉದ್ದೇಶಕ್ಕಾಗಿ ಬರೆದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ 3 ವರ್ಷಗಳ ಹಿಂದೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೋಲಿಸರು ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ, ಬೇರೆ ಯಾವುದೇ ಮಾಹಿತಿ ಇರುವುದಿಲ್ಲ.

(ಮಾನ್ಯ ಪಿಪಿ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

1. ದಿನಾಂಕ 25-08-2019 ರಂದು ವಿ ಎಸ್ ಎಸ್ ಎನ್ ಸೊಸೈಟಿ ಬಳಿ ನಾನು ಮತ್ತು ಚಾಸಾ-3 ರವರು ಇದ್ದಾಗ 1 ನೇ ಆರೋಪಿಯು ಅಲ್ಲಿಯೇ ಇದ್ದನು ಎಂದರೆ ಸರಿಯಲ್ಲ. ಆ ದಿನ ಸಂಜೆ 5.00 ಗಂಟೆ ಸಮಯದಲ್ಲಿ ನಮ್ಮ ಊರಿನವರಾದ ಚಾಸಾ-1 ಗಂಗಣ್ಣನವರು ಅಗಲಕೋಟೆ ಹ್ಯಾಂಡ್ ಪೋಸ್ಟ್ ಕಡೆಯಿಂದ ಬೈಕಿನಲ್ಲಿ ಬರುತ್ತಿರುವಾಗ ಚಾಸಾ-1 ರವರನ್ನು ಆರೋಪಿಯು ಅಡ್ಡಗಟ್ಟಿ ಚೇತನ್ ವಿರುದ್ದ ಹೈಕೋರ್ಟ್ ನಲ್ಲಿ ಏಕೆ ಕೇಸುಹಾಕಿದ್ದೀಯಾ ಆತನನ್ನು ಕೆಲಸದಿಂದ ತೆಗೆಸಿಹಾಕುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ನಿನಗೆ ಒಂದು ಗತಿಕಾಣಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿಯು ತೆಂಗಿನ ಗೊದಮೊಟ್ಟೆಯಿಂದ ಮುಖಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಗಲಾಟೆ ಸ್ಥಳಕ್ಕೆ ಅಲ್ಲಿಯೇ ಇದ್ದ ನಾನು ಮತ್ತು ಚಾಸಾ-3 ಹಾಗೂ ಇತತರು ಸ್ಥಳಕ್ಕೆ ಬಂದೆವು ಎಂದರೆ ಸರಿಯಲ್ಲ. ನಾನು ಆರೋಪಿಯ ಕೈಯಲ್ಲಿದ್ದ ತೆಂಗಿನ ಗೊದಮೊಟ್ಟೆಯನ್ನು ಕಿತ್ತುಕೊಂಡು ಜಗಳದಿಂದ ಚಾಸಾ-1 ರವರನ್ನು ಬಿಡಿಸಲು ಪ್ರಯತ್ನಪಟ್ಟೆನು ಎಂದರೆ ಸರಿಯಲ್ಲ. ಆದರೆ ಆರೋಪಿಯು ಅಲ್ಲಿಯೇ ಬಿದ್ದಿದ್ದ ಒಂದು ಕಾಡುಜಾತಿಯ ದೊಣ್ಣೆಯಿಂದ ಚಾಸಾ-1 ರವರ ಎಡಗೈಗೆ ಹೊಡೆದನು ಎಂದರೆ ಸರಿಯಲ್ಲ. ಆಗ ಚಾಸಾ-3 ರವರು ಆರೋಪಿಯ ಕೈಯಿಂದ ದೊಣ್ಣೆಯನ್ನು ಕಿತ್ತುಕೊಂಡನು ಎಂದರೆ ಸರಿಯಲ್ಲ, ಆದರೂ ಸಹ ಆರೋಪಿಯು ಕೈಗಳಿಂದ ಚಾಸಾ-1 ರವರ ಮುಖಕ್ಕೆ ಹೊಡೆದನು ಎಂದರೆ ಸರಿಯಲ್ಲ ನಂತರ ನಾನು, ಚಾಸಾ-3 ರವರು ಚಾಸಾ-1 ರವರನ್ನು ಜಗಳದಿಂದ ಬಿಡಿಸಿದೆವು ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಚಿಕಿತ್ಸೆಯನ್ನು ಪಡೆಯಲು ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಚಾಸಾ-1 ರವರು ದಿನಾಂಕ 27-08-2019 ರಂದು ನೀಡಿದ ದೂರಿನ ಮೇರೆಗೆ ಪೋಲಿಸರು ದಿನಾಂಕ 27-08-2019 ರಂದು ಸ್ಥಳಮಹಜರ್ ಗೆಂದು ಅಗಲಕೋಟೆ ವಿ ಎಸ್ ಎಸ್ ಎನ್ ಸೊಸೈಟಿ ಮುಂಭಾಗದ ರಸ್ತೆಯ ಬಳಿ ಪಂಚನಾಮೆಗೆ ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯಕ್ಕೆ ನಾನು, ಚಾಸಾ-4 ಮತ್ತು 5 ರವರು ಇದ್ದು ಸ್ಥಳಪಂಚನಾಮೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮಹಜರನ್ನು ಬೆಳಿಗ್ಗೆ 9.30 ರಿಂದ 10.15 ರ ವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಸಮಯದಲ್ಲಿ ನಮ್ಮ ಸಮಕ್ಷಮ ಒಂದು ತೆಂಗಿನ ಗೊದಮೊಟ್ಟೆ ಮತ್ತು ಕಾಡುಜಾತಿಯ ದೊಣ್ಣೆಯನ್ನು ಮುಂದಿನ ತನಿಖೆಗಾಗಿ ವಶಪಡಿಸಿಕೊಂಡು ಎಂದರೆ ಸರಿಯಲ್ಲ. ಆ ಬಗ್ಗೆ

ದಿನಾಂಕ 02-09-2019 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ನುಡಿದಿರುತ್ತಾರೆ.

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಮಾಗಡಿ